ಆ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಹೆಚ್ಟಿ ವಿದ್ಯುತ್ ಸಂಪರ್ಕವನ್ನು ಒದಗಿಸಿದ ತಕ್ಷಣ ಎಲ್ಲಾ ಉಪಕರಣಗಳನ್ನು ಚಾಲನೆಗೆ ತರಲಾಗುವುದು.

ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಅನುದಾನ.

೧೩೬೨(೧೬೧೨)

ಶ್ರೀ ಅಭಯ ಚಂದ್ರ ಕೆ.(ಮೂಡಬಿದ್ರೆ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ತಾಂತ್ರಿಕ ಶಿಕ್ಷಣ ಸಂಸ್ಥೆ (ಪಾಲಿಟೆಕ್ನಿಕ್)ಗಳಿಗೆ ಅನುದಾನ ಕೊಡುವ ಯೋಜನೆ ಯಾವ ಹಂತದಲ್ಲಿದೆ;

೨. ಅನುದಾನ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ?

ಡಾ:ಜಿ.ಪರಮೇಶ್ವರ: (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು):

೧. ಸರ್ಕಾರಿ ಆದೇಶ ಸಂಖ್ಯೆ:ಇಡಿವಿಲಓ ಟಿಪಿಇ ೯೮ ದಿನಾಂಕ: ೫-೨-೨೦೦೧ ಮತ್ತು ೦೩-೦೩-೨೦೦೧ರ ಅನುಸಾರ ೩೩ ಪಾಲಿಟೆಕ್ನಿಕ್‌ಗಳನ್ನು ಅನುದಾನದಡಿ ತರಲಾಗಿದೆ.

೨. ಪ್ರತಿಯೊಂದು ಪಾಲಿಟೆಕ್ನಿಕ್‌ನ ಬೋಧಕ: ಬೋಧಕೇತರ ಹುದ್ದೆಗಳ ವಿವರಗಳನ್ನು ಎಐಸಿಟಿಇ ಮಾರ್ಗಸೂಚಿ ಅನುಸಾರ ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಸದರಿ ಪಾಲಿಟೆಕ್ನಿಕ್‌ಗಳಿಗೆ ಅನುದಾನ ಬಿಡುಗಡೆಗೆ ಕ್ರಮ ಜರುಗಿಸಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು.

೧೩೬೪(೧೭೫೧)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್(ಸೋಮವಾರಪೇಟೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?